# ಕಲಾವಿದರಿಗಾಗಿ ಅನುದಾನ

ಕಲಿ ಕಲಿಸು ಯೋಜನೆಯ ಅಡಿಯಲ್ಲಿ ಸರ್ಕಾರಿ ಶಾಲೆಗಳೊಂದಿಗೆ ನಮ್ಮ ಕಾರ್ಯಕ್ಷೇತ್ರದ ವಿಸ್ತರಣೆಯಾಗಿ ಕಲಾವಿದರು ಮತ್ತು ಶಾಲಾ ಸಮುದಾಯದ ನಡುವೆ ಸಹಯೋಗವನ್ನು ಬಲಪಡಿಸುವ ಉದ್ದೇಶ ಹೊಂದಿದೆ. ಕಲಾವಿದರನ್ನು ಪ್ರೇರೇಪಿಸುತ್ತಾ ಅವರ ಕಲಾ ಅಭ್ಯಾಸಗಳನ್ನು ಮತ್ತು ಸಾಧ್ಯತೆಗಳನ್ನು ವಿಸ್ತರಿಸುವುದು ಹಾಗೆಯೇ ಶಾಲಾ ಸಮುದಾಯದಲ್ಲಿ ಶಿಕ್ಷಕರೊಂದಿಗೆ ಕಲಾವಿದರನ್ನು ಸಹ ಭಾಗಿದಾರರನ್ನಾಗಿ ಮಾಡುವುದು, ಆ ಮೂಲಕ ಪಠ್ಯಕ್ರಮ ಮತ್ತು ತರಗತಿ ಬೋಧನೆಯನ್ನು ಶ್ರೀಮಂತಗೊಳಿಸುವುದು.

ಕಳೆದ ಮೂರು ವರ್ಷಗಳಲ್ಲಿ ಐ ಎಫ್ ಎ ಹತ್ತೊಂಬತ್ತು ಕಲಾವಿದರ ಯೋಜನೆಗಳಿಗೆ ಅನುದಾನ ನೀಡಿದೆ. ಈ ಯೋಜನೆಗಳು ದೃಶ್ಯಕಲೆ, ಪ್ರದರ್ಶನ ಕಲೆ ಮತ್ತು ಸಾಹಿತ್ಯದಂತಹ ವಿವಿಧ ಕಲಾಪ್ರಕಾರಗಳಿಗೆ ಮಹತ್ವ ನೀಡಿದೆ. ಇದರೊಂದಿಗೆ ಕಥೆ ಪುಸ್ತಕ, ಶ್ರವ್ಯ ಮತ್ತು ಪಠ್ಯ ದಾಖಲೀಕರಣಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಈ ಪ್ರಕ್ರಿಯೆಗಳಿಂದ ಓದುವ ಸಂಸ್ಕೃತಿಯನ್ನು ಉದ್ದೀಪಿಸುವ ಮತ್ತು ಗ್ರಂಥಾಲಯವನ್ನು ಒಂದು ಓದುಗ ಸ್ನೇಹಿ ಮತ್ತು ಪರಿಚಿತ ಸ್ಥಳವನ್ನಾಗಿಸಲು ಸಾಧ್ಯವಾಗುತ್ತದೆ. ದಿನಬಳಕೆಯ ವಸ್ತುಗಳನ್ನು ಮರು ಬಳಸುವ ಪರಿಪಾಠವನ್ನು ಇದು ಪ್ರೋತ್ಸಾಹಿಸಿದೆ. ದಾಖಲೀಕರಣ, ಪರಿಸರದ ಕಾಳಜಿಗಳು, ಜನಪದ ಸಂಸ್ಕೃತಿಯನ್ನು ಶಿಕ್ಷಣದಲ್ಲಿ ಮರು ಪರಿಚಯಿಸುವುದು ಕೂಡ ನಮ್ಮ ಆದ್ಯತೆಗಳಲ್ಲಿ ಒಂದಾಗಿದೆ.

# ಆಯ್ಕೆವಿಧಾನ

ಪ್ರತಿ ವರ್ಷದ ಮೇ-ಜೂನ್ ಹಾಗೂ ಸೆಪ್ಟೆಂಬರ್-ಅಕ್ಟೋಬರ್ ಅವಧಿಯಲ್ಲಿ ಕಲಾವಿದರಿಂದ ಯೋಜನೆಗಳನ್ನು ಆಹ್ವಾನಿಸಲಾಗುತ್ತದೆ. ಕಲಾವಿದರು, ಸ್ಥಳೀಯ ಸಂಪನ್ಮೂಲಗಳು ಮತ್ತು ಶಾಲಾ ಸಮುದಾಯದ ನಡುವೆ ಸಹಯೋಗವನ್ನು ಗಟ್ಟಿಗೊಳಿಸಲು ಐ ಎಫ್ ಎ ಸಂಸ್ಥೆಯು ಕಲಿ ಕಲಿಸು ಯೋಜನೆಯ ಮುಖಾಂತರ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತದೆ.

ಅರ್ಜಿ ವಿಧಾನಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಇ-ಮೇಲ್ ಮಾಡಿ :

ಕೃಷ್ಣಮೂರ್ತಿ ಟಿ ಎನ್, ಕಾರ್ಯಕ್ರಮ ನಿರ್ವಹಣಾಧಿಕಾರಿ, ಕಲಾ ಶಿಕ್ಷಣ - krishna@indiaifa.org

ರಾಧಿಕಾ ಭಾರದ್ವಾಜ್, ಸಹ ಕಾರ್ಯಕ್ರಮ ನಿರ್ವಹಣಾಧಿಕಾರಿ,ಕಲಾ ಶಿಕ್ಷಣ - radhika@indiaifa.org